<u>50ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು</u>

<u>ಸಿ.ಸಿ. ನಂ.4317/2019</u>

ಪಿ.ಡಬ್ಲೂ - 1 ಸಿ.ಡಬ್ಲೂ-6

| | |
|---|---|
| ಸಾಕ್ಷಿದಾರರ ಹೆಸರು | : ಕವಿತಾ |
| ಗಂಡನ ಹೆಸರು | : ರಮೇಶ ರೆಡ್ಡಿ |
| ವಯಸ್ಸು | : 37 ವರ್ಷ |
| ಕೆಲಸ | : ಮಣಪುರಂ ಗೋಲ್ಡ ಕಚೇರಿಯಲ್ಲಿ ಕೆಲಸ |
| ವಾಸ | : ಹೆಗ್ಗನಹಳ್ಳಿ, ಬೆಂಗಳೂರು |

**<u>ಸಾಕ್ಷಿಯನ್ನು ದಿನಾಂಕ:- 13.03.2026 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಹಿ.ಸ.ಸಾ.ಅ. ರವರಿಂದ:</u>**

ನಾನು ಸುಮಾರು 14 ವರ್ಷಗಳಿಂದ ಮಣಪುರಂ ಗೋಲ್ಡ ಫೈನಾನ್ಸ ನಲ್ಲಿ ಕೆಲಸ ಮಾಡುತ್ತಿದ್ದೇನೆ.

2019ರಲ್ಲಿ ಬಂಗಾರದ ಒಡವೆಗಳನ್ನು ಕಳ್ಳತನ ಮಾಡಿ ನಮ್ಮ ಫೈನಾನ್ಸನಲ್ಲಿ ಅಡವಿಟ್ಟಿದ್ದಾರೆ ಎಂದು ಪೊಲೀಸರು ಬಂದಿದ್ದರು. ಆ ಸಮಯದಲ್ಲಿ ಚಾಸಾ-5 ರವರು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತಾರೆ. ಆಗ ನನಗೆ ಸಹಿ ಮಾಡಿ ಎಂದು ಹೇಳಿದ್ದರು ಆ ಕಾರಣದಿಂದ ನಾನು ಸಹಿ ಮಾಡಿರುತ್ತೇನೆ. ಸಾಕ್ಷಿ ಅಮಾನತ್ತು ಪಂಚನಾಮೆಯಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು, ಅಮಾನತ್ತು ಪಂಚನಾಮೆಯನ್ನು ನಿಪಿ-1 ಸಾಕ್ಷಿ ಸಹಿ ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ನ್ಯಾಯಾಲಯದ ಮುಂದೆ ವಿ ಸಿ ಯಲ್ಲಿ ಹಾಜರು ಪಡಿಸಿದ ಆರೋಪಿಯನ್ನು ಈ ಹಿಂದೆ ನೋಡಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿದಾರರು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದಿದ್ದರಿಂದ, ಹಿ.ಸ.ಸಾ.ಅ. ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲು</u> <u>ಹಿ.ಸ.ಸಾ.ಅ. ರವರಿಂದಃ</u>**

ದಿಃ 24.11.2018 ರಂದು ಪೊಲೀಸರು ಮೊಕದಮ್ಮೆ 370/2018 ರಲ್ಲಿ ದಸ್ತಸಗಿರಿಯಾದ ಆರೋಪಿ ಹಾಗೂ ಇನ್ನೊಬ್ಬ ನಾಗರಾಜು ರವರನ್ನು ಹಾಗೂ ಆರೋಪಿಯ ಹೆಂಡತಿಯಾದ ಜಯಮ್ಮ ರವರನ್ನು ಕರೆದುಕೊಂಡು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಆಗ ಆರೋಪಿಗಳು ತಾವು ಕಾಮಾಕ್ಷಿಪಾಳ್ಯ ಪೊಲೀಸ್ ಠಾಣಾ ಸರಹದ್ದಿನಲ್ಲಿ ಹಗಲು ವೇಳೆಯಲ್ಲಿ ಮನೆ ಹಾಗೂ ಬಸ್ ನಲ್ಲಿ ಪ್ರಯಾಣಿಸುವ ಪ್ರಯಾಣಿಕರಿಂದ ಒಡವೆಗಳನ್ನು ಕಳ್ಳತನ ಮಾಡಿ ಅದರಲ್ಲಿಯ ಕಳ್ಳತನ ಮಾಡಿದ ಒಡವೆಗಳನ್ನು 1ನೇ ಆರೋಪಿಯ ಹೆಂಡತಿ ಜಯಮ್ಮ ಎಂಬುವವರ ಹೆಸರಿನಲ್ಲಿ ನಮ್ಮ ಮಣಪುರಂ ಫೈನಾನ್ಸ ನಲ್ಲಿ ಅಡಮಾನ ಇಟ್ಟಿರುತ್ತಾರೆ ಎಂದು ಪೊಲೀಸರು ಚಾಸಾ-5 ರವರಿಗೆ ಹೇಳಿರುತ್ತಾರೆ ಎಂದರೆ ಸರಿ. ಆಗ ಚಾಸಾ-5 ರವರು ನಡೆದ ವ್ಯವಹಾರ ನಿಜವೆಂದು ಒಪ್ಪಿಕೊಂಡು ಸಾಲದ ಅರ್ಜಿ ಕೊನೆ ಸಂ.188 ಹಾಗೂ 269 ರಲ್ಲಿ ಸುಮಾರು 16.2 ಹಾಗೂ 15 ಗ್ರಾಂ ಬಂಗಾರ ಬ್ರಾಸ್ ಲೇಟ್, ಉಂಗುರ ಗಳನ್ನು ಜಯಮ್ಮರವರು ತಮ್ಮ ಹೆಸರಿನಲ್ಲಿ ಅಡಮಾನ ಇಟ್ಟಿರುತ್ತಾರೆ ಎಂದು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಡಮಾನ ಇಟ್ಟ ಒಡವೆಗಳನ್ನು ಪೊಲೀಸರಿಗೆ ಚಾಸಾ-5 ತೋರಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಗ ಚಾಸಾ-5 ರವರಿಗೆ ಈಗಸ್ಟೆ ಕಳುವು ಮಾಲು ಎಂದು ಗೊತ್ತಾಗಿದೆ ಎಂದು ತಿಳಿದು ಬಂದಿದೆ ಎಂದು ಹೇಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಂತರ ಪೊಲೀಸರು ಸಾಲದ ಅರ್ಜಿಗಳನ್ನು ಮತ್ತು ಒಡವೆಗಳನ್ನು ನಮ್ಮ ಸಮಕ್ಷಮ ನಿಪಿ-1 ರಂತೆ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ನಿಪಿ-1 ರ ಕಾಲಕ್ಕೆ ನಾನು ಮತ್ತು ಚಾಸಾ-5 ರವರು ಇದ್ದೇವು ಎಂದರೆ ಸರಿ. ದಿಃ 24.11.2018 ರಂದು ಮಧ್ಯಾಹ್ನ 12.00 ರಿಂದ 1.00 ಗಂಟೆಯವರೆಗೂ ನಿಪಿ-1 ರ ಪಂಚನಾಮೆ ಜರುಗಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಕೂಡ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ವಿಚಾರಗಳ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆಯನ್ನು ನಿಪಿ-2 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿತರ ಪರ ವಕೀಲರಿಂದಃ</u>**

ಆರೋಪಿ ಪರ ವಕೀಲರಿಂದ ಪಾಟೀ ಸವಾಲು ಏನು ಇರುವುದಿಲ್ಲ.

**<u>ಮರುವಿಚಾರಣೆಃ ಇಲ್ಲ</u>**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಯಿತು.)

**ಓ ಹೇ ಕೇ ಸ ಇ ಒ**

**ಸಹಿ/-**

**50ನೇ ಅ. ಮು. ಮ. ದಂ. ನ್ಯಾ**